Sri K. V. SHANKARA GOWDA (Minister for Agriculture and Education).—Sir, the Hon'ble Member has raised the question of Hindi as an Examination subject in the Teachers Training Course for Primary School Teachers. In view of the large scale failure in Hindi subject only, the Hon'ble Member suggests that Hindi as a subject may be cancelled from the Course. As Members are aware Hindi is taught as a Compulsory subject in Standards VI and VII of our Primary Schools. Hence every teacher in a Primary School must be capable of teaching three languages, *viz.*, mother-tongue, English and Hindi. Primary School Teachers are non-specialist general purpose teachers who can be posted to any school in the State whether Lower Primary or Upper Primary. These are no specialist language teachers as such in Primary Schools. Hence in the revised syllabus of the Teachers Training Certificate Course, Government have introduced Hindi as a compulsory subject of study. As the candidates are deputed to the Course and are paid full salaries and allowances for the course, it is their duty to pass the course. If they cannot get 35 per cent in the subject, it only shows that they are not suitable to be teachers in Primary Schools. In the last Examination for the Teacher Certificate (Lower) 85 per cent of the students passed in Hindi. Hence the contention that there was large scale failure in Hindi subject only, cannot be accepted. I appeal to Members to permit Government to maintain high standards in teacher education.

Member's Representation

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ನಿನ್ನೆಯ ದಿವಸ ಒಬ್ಬರು ಮಾನ್ಯ ಸದಸ್ಯರು ಸರ್ಕಾರದ ಗಮನವನ್ನು ಸೆಳೆದರು, ಶ್ರೀಮಾನ್ ನಾಗಣ್ಣನವರು ಬೆಂಗಳೂರಿನ ಕುಡಿಯುವ ನೀರಿನ ಸರಬರಾಜಿನ ವಿಷಯದಲ್ಲಿ ವಿಧಾನಸೌಧದ ಮುಂದೆ ಉಪವಾಸ ಮಾಡುತ್ತಿದ್ದಾರೆಂದು. ಈ ಹೊತ್ತು ಈ ಮಾನ್ಯ ಸಭೆಯ ಸದಸ್ಯರಾದ ಶ್ರೀ ಟಿ. ಆರ್. ಶಾಮಣ್ಣನವರು ವಿಧಾನ ಸೌಧದ ಎದುರುಗಡೆ ಉಪವಾಸಕ್ಕೆ ಕುಳಿತುಕೊಂಡಿದ್ದಾರೆ. ಕಾವೇರಿ ನದಿಯ ನೀರನ್ನು ಬೆಂಗಳೂರಿಗೆ ತರುವುದಕ್ಕೆ ವಾಟರ್ ಸಪ್ಲೈ ಅಂಡ್ ಸ್ಯೂಯರೇಜ್ ಬೋರ್ಡಿನವರು ನೀರಿನ ದರಗಳನ್ನು ಏರಿಸುವುದಕ್ಕೆ, ನಲ್ಲಿಗಳನ್ನು ನಿಲ್ಲಿಸುವುದಕ್ಕೆ ಕಾರಣರಾಗಿರುವುದರಿಂದ ಜನಗಳಿಗೆ ಕಷ್ಟವಾಗಿದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮತ್ತು ಮಾನ್ಯ ಆರ್. ಎಂ. ಪಾಟೀಲರು ಈ ಮಾನ್ಯಸಭೆಗೆ ಸಮಂಜಸವಾದ ಉತ್ತರವನ್ನು ಕೊಡಬೇಕು. ಇದು ಬಹಳ ಮುಖ್ಯವಾದ ಮತ್ತು ಜವಾಬ್ದಾರಿಯುತವಾದ ವಿಷಯ.

ಆದ್ದರಿಂದ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಏನೆಂದರೆ ಕಾವೇರಿ ನೀರನ್ನು ಬೆಂಗಳೂರಿಗೆ ತರುವ ಯೋಜನೆ ಏನಾಗಿದೆ ಮತ್ತು ಈಗಿರ ತಕ್ಕಂಥ ನೀರಿನ ದರವನ್ನು ಹಿಂದೆ ಇದ್ದ ದರದಂತೆ ಪುನರ್ಪರಿಶೀಲನೆ ಮಾಡುವಂಥ ಕ್ರಮವನ್ನು ಕೈಕೊಳ್ಳುತ್ತೀರಾ? ಈಗ ಒಂದೊವರೆ ಕೋಟಿ ರೂಪಾಯಿಗಳ ಬಾಕಿ ಏನಿದೆ ಅದನ್ನು ವಸೂಲು ಮಾಡುವುದಕ್ಕಾಗಿ ನಲ್ಲಿಗಳನ್ನು ನಿಲ್ಲಿಸುವುದು ಸರಿಯೇ? ಇದರ ಜೊತೆಗೆ ಚತ್ರಗಳಿಗೆ ಧರ್ಮವಾಗಿ ಕೊಡುತ್ತಿದ್ದ ನೀರನ್ನು ನಿಲ್ಲಿಸಿರುವುದು ಸರಿಯೇ? ಈ ಎಲ್ಲಾ ಪ್ರಶ್ನೆಗಳಿಗೂ ಸಮಂಜಸವಾದಂಥ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಈ ಖಾತೆಯನ್ನು ನೋಡುತ್ತಿರುವ ಮಾನ್ಯ ಮಂತ್ರಿಗಳಾದ ಶ್ರೀ ಪಾಟೀಲ್ ಅವರು ಕೊಡುವುದು ಒಳ್ಳೆಯದೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಸಭೆಯ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಶಾಮಣ್ಣನವರು ಸುಮಾರು 24 ಗಂಟೆಗಳ ಉಪವಾಸವನ್ನು ಪ್ರಾರಂಭ ಮಾಡಿದ್ದಾರೆ. ಬೆಂಗ

(ಶ್ರೀ ಪಾಟಾಳ್ ನಾಗರಾಜ್)

ಳೂರಿನ ಜನರಿಗೆ ನ್ಯಾಯವಾದ ದರದಲ್ಲಿ ನೀರನ್ನು ಒದಗಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟಂಥ ಮಂತ್ರಿಗಳು ಒಂದು ಭರವಸೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸ್ವಾಮಿ, ತಮ್ಮ ಮೂಲಕ ಒಂದು ವಿಷಯವನ್ನು ಹೇಳಬೇಕೆಂದಿದ್ದೇನೆ. ಇದೇ ವಿಷಯ ಮೊನ್ನೆ ಈ ಸಭೆಯಲ್ಲಿ ಪ್ರಸ್ತಾಪ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಬಂದು ಮಾತನಾಡಬಹುದೆಂದು ಹೇಳಿದರು. ಅದರಂತೆ ನಾನು, ಶ್ರೀಮಾನ್ ಶಾಮಣ್ಣನವರು ಮತ್ತು ಶ್ರೀಮಾನ್ ಪಾಟಾಳ್ ನಾಗಂರಾಜ್ ಅವರು ಹೋಗಿ ಮಾತನಾಡಿದಾಗ, ಈ ಬಗ್ಗೆ ಅಧಿಕಾರಿಗಳಿಂದ ವಿವರಣೆಯನ್ನು ಕೇಳಬೇಕಾಗಿರುವುದರಿಂದ ಸ್ವಲ್ಪ ಕಾಲಾವಕಾಶಬೇಕೆಂದು ಹೇಳಿದರು. ನಮಾರು ಒಂದು ತಿಂಗಳು ಕಾಲಾವಕಾಶ ಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಕೇಳಿದ್ದರಿಂದ ಈಗ ಪರಿಸ್ಥಿತಿ ಬಿಗಡಾಯಿಸಿದೆ. ನೆನ್ನೆ ದಿವಸ ಶ್ರೀಮಾನ್ ನಾಗಣ್ಣನವರು ಉಪವಾಸ ಮಾಡಿದರು. ಇವತ್ತು ಶ್ರೀಮಾನ್ ಶಾಮಣ್ಣನವರು ಉಪವಾಸ ಮಾಡುತ್ತಿದ್ದಾರೆ, ಆದ್ದರಿಂದ ಬೆಂಗಳೂರಿನ ಜನತೆಗೆ ಈ ವಿಷಯದ ಬಗ್ಗೆ ಅದಷ್ಟು ಬೇಗ ತೀರ್ಮಾನ ತೆಗೆದುಕೊಂಡು ಒಂದು ಭರವಸೆ ಕೊಡಬೇಕು ; ಮತ್ತು ಶ್ರೀಮಾನ್ ಗೋಪಾಲಗೌಡರು ಕೇಳಿದಂತೆ, ಕಾವೇರಿ ನೀರನ್ನು ಬೆಂಗಳೂರಿಗೆ ತರುವ ಬಗ್ಗೆ ಇದುವರೆಗೆ ಎಷ್ಟು ಹಣ ಖರ್ಚಾಗಿದೆ ಮತ್ತು ಎಷ್ಟು ಕೆಲಸ ನಡೆದಿದೆ ಎಂಬುದನ್ನು ತಿಳಿಸಬೇಕು. ನೀರಿನ ತೆರಿಗೆಯನ್ನು ಮೊದಲನಂತೆ ಕಡಿಮೆ ಮಾಡುವ ಬಗ್ಗೆ ಈಗ ಒಂದು ಭರವಸೆಯನ್ನು ಕೊಟ್ಟರೆ ಬೆಂಗಳೂರಿನ ಜನರಿಗೆ ಅನುಕೂಲವಾಗುತ್ತದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಮಾನ್ಯ ಸದಸ್ಯರುಗಳಾಗಿರತಕ್ಕಂಥ ಪಾಟಾಳ್ ನಾಗರಾಜ್ ಮತ್ತು ಕೃಷ್ಣನ್ ಅವರುಗಳು ಮತ್ತು ಶ್ರೀಮಾನ್ ರಂಗಪ್ಪನವರು, ಈ ಮೂವರು ಬಂದು ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ಆರ್. ಎಂ. ಪಾಟೀಲರ ಸಮಕ್ಷಮದಲ್ಲಿ ಸಾಕಷ್ಟು ಕಾಲ ವಿಚಾರವಿನಿಮಯ ಮಾಡಿ, ಇನ್ನೂ ಕೆಲವು ವಿಚಾರಗಳನ್ನು ತಿಳಿದುಕೊಳ್ಳುವುದು ಅವಶ್ಯಕವೆಂದು ತಿಳಿದುಬಂತು. ಈಗ ಎಷ್ಟರಮಟ್ಟಿಗೆ ರಿಯಾಯಿತಿ ಕೊಡಬಹುದು, ಹೇಗೆ, ಎಲ್ಲಿ ಡಿಸ್‌ಕನೆಕ್ಟ್ ಮಾಡಿದ್ದಾರೆ, ಏತಕ್ಕೆ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗಿರುವುದರಿಂದ ನಮಗೆ ಸ್ವಲ್ಪ ಕಾಲಾವಕಾಶ ಬೇಕೆಂದು ಕೇಳಿದೆವು. ಈಗ ವಿಚಾರ ಮಾಡುತ್ತಿದ್ದೇವೆ. ಈ ಮಧ್ಯೆ ಉಪವಾಸ ಪ್ರಾರಂಭ ಮಾಡಿರುವುದು ಸರಿಯಲ್ಲ. ನಾವು ಕಾಲಾವಕಾಶ ಕೇಳಿದ್ದೇವೆ. ಅದರಂತೆ ಮಾನ್ಯ ಸದಸ್ಯರುಗಳು ಒಪ್ಪಿಕೊಂಡಿದ್ದಾರೆ. ಈಗ ನಮಗೆ ಕಾಲಾವಕಾಶ ಕೊಡದೇ ಉಪವಾಸ ಮಾಡುವುದು ಸರಿಯಲ್ಲವೆಂದು ಕಾಣುತ್ತದೆ. ಇದನ್ನು ಸರ್ಕಾರ ಯೋಚನೆ ಮಾಡುತ್ತಿದೆ. ಸಂಬಂಧಪಟ್ಟ ಅಂಕಿಅಂಶಗಳನ್ನು ತರಿಸಿ ತೀರ್ಮಾನ ಮಾಡಬೇಕಾಗುತ್ತದೆ. ಅದು ಮಾನ್ಯ ಸದಸ್ಯರಿಗೆ ಗೊತ್ತು. ಆದ್ದರಿಂದ ಅವರು ಅವಸರವಾಗಿ ಉಪವಾಸ ಮಾಡತಕ್ಕದ್ದೂ ಸರಿಯಲ್ಲ. ಮಾನ್ಯ ಸದಸ್ಯರು ಅದನ್ನು ಬಿಡಬೇಕೆಂದು ಕೇಳಿಕೊಂಡರೆ ಒಳ್ಳೆಯದು. ಮತ್ತು ಕಾವೇರಿ ನೀರು ಎಷ್ಟು ತಂದರು, ಏನೆಂಬುದನ್ನೆಲ್ಲಾ ಇವರು ಬಜೆಟ್ ಚರ್ಚೆಯಲ್ಲಿ ಕೇಳಲಿ, ಸಾಕಷ್ಟು ವಿವರ ಹೇಳುತ್ತೇವೆ. ಉಪವಾಸ ವಿಚಾರದಲ್ಲಿ ಸ್ವಲ್ಪ ಕಾಲ ತೆಗೆದುಕೊಳ್ಳತಕ್ಕದ್ದೂ ಗೊತ್ತಿದ್ದೂ ಉಪವಾಸ ಮಾಡಿದ್ದು ಸರಿಯಲ್ಲ. ಅದನ್ನು ಸಾಕಷ್ಟು ವಿಚಾರ ಮಾಡಿ ಅದಷ್ಟು ಜಾಗ್ರತೆ ಒಂದು ತೀರ್ಮಾನ ಮಾಡುತ್ತೇವೆ.

STATEMENT BY MINISTER FOR HOME AND MUNICIPAL ADMINISTRATION

re : Mass Murder at Rudgi within the jurisdiction of Muddebihal Police Station.

Mr. DEPUTY SPEAKER.—The Hon'ble Minister for Home has promised to make a statement. If it is ready he may do so·